[Govt. of Karnataka C.R.P. 67]

| Deposition Sheets (RP.No.57) Form No.4 | IN THE COURT OF PRL. CIVIL JUDGE & J.M.F.C., KARKALA.<br><br>Criminal Case No. 530/2024 |
|---|---|

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 3

ಸಾಕ್ಷಿದಾರನ ಹೆಸರು : ದೇವಿ ಪ್ರಸಾದ್ ಹಾಂಡ

ತಂದೆಯ ಹೆಸರು : ಗೋಪಾಲ್ ಹಾಂಡ

ಪ್ರಾಯ : 41 ವರ್ಷ

ಉದ್ಯೋಗ : ವಿದ್ಯುತ್ ಕಂಬದ ಕೆಲಸ

ವಾಸ : ಕಡ್ತಲ

ದಿನಾಂಕ 08-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಸಾಕ್ಷಿಯು ಗುರುತಿಸಿರುತ್ತಾರೆ.

ಚಾಸಾ-1, 2, ಚಾಸಾ-4 ರಿಂದ 8 ಹಾಗೂ ಮೃತ ಸತೀಶ್ ಶೆಟ್ಟಿಯವರ ಪರಿಚಯ ಇದೆ. ನಾವೆಲ್ಲ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು.

ನಾನು 2 ನೇ ಆರೋಪಿ ಶಂಕರ್ ನಾಯಕ್ ರವರೊಂದಿಗೆ ಸುಮಾರು 10 ವರ್ಷದಿಂದ ಕರೆಂಟ್ ಲೈನ್ ಕೆಲಸ ಮಾಡಿಕೊಂಡಿರುತ್ತೇನೆ. ದಿ: 04-07-2023 ರಂದು 2 ನೇ ಆರೋಪಿ ಹೇಳಿದಂತೆ ನಾನು ಹಾಗೂ ಚಾಸಾ-1, 2, ಚಾಸಾ-4 ರಿಂದ 8 ಹಾಗೂ ಮೃತ ಸತೀಶ್ ಶೆಟ್ಟಿ ಕಣಜಾರು ಗ್ರಾಮದ ಪೆಲತ್ತೂರಿಗೆ ಒಂದು ಮನೆಯ ಪಂಪ್ ಸೆಟ್ ಸರಿ ಮಾಡಲು ಹೋಗಿರುತ್ತೇವೆ. ಅಲ್ಲಿ ವಯರಿಂಗ್ ಕೆಲಸ ಮಾಡಿರುತ್ತೇವೆ. ಮಧ್ಯಾಹ್ನ ದವರೆಗೂ ಕೆಲಸ ಮಾಡಿ ಊಟ ಮಾಡಿದ ನಂತರ ವಯರ್ ಕನೆಕ್ಷನ್ ಸರಿ ಇಲ್ಲ ಎಂದು ಶಂಕರ್ ನಾಯಕ್ ರವರು ತಿಳಿಸಿದ್ದು ಅವರು ಹೇಳಿದ ನಂತರ ಅಂದಾಜು 2.30 ಗಂಟೆಯ ಸಮಯದಲ್ಲಿ ಮೃತ ಸತೀಶ್ ಶೆಟ್ಟಿಯವರು ವಿದ್ಯುತ್ ಕಂಬಕ್ಕೆ ಕರೆಂಟ್ ಸರಿಮಾಡಲು ಹತ್ತಿದ್ದು ಹತ್ತು ನಿಮಿಷದ ನಂತರ ಅವರಿಗೆ ವಿದ್ಯುತ್ ತಾಗಿರುತ್ತದೆ. ನಂತರ ಅವರು ಕೆಳಗೆ

ಬಿದ್ದಿರುತ್ತಾರೆ. ಅವರಿಗೆ ಕಿವಿ, ಹೊಟ್ಟೆ ಕಾಲಿನ ಬಳಿ ಸುಟ್ಟ ಗಾಯಗಳಾಗಿರುತ್ತದೆ. ನಂತರ ಅವರನ್ನು ಮಣಿಪಾಲದ ಕೆ.ಎಮ್.ಸಿ ಆಸ್ಪತ್ರೆಗೆ 2 ನೇ ಆರೋಪಿ ಹಾಗೂ ಉಳಿದ ಕೆಲಸಗಾರರು ದಾಖಲಿಸಿರುತ್ತಾರೆ. ಆಸ್ಪತ್ರೆಯಲ್ಲಿ ವೈದ್ಯರು ಸತೀಶ್ ಶೆಟ್ಟಿಯವರು ಮೃತಪಟ್ಟ ಬಗ್ಗೆ ತಿಳಿಸಿರುತ್ತಾರೆ. ಈ ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು : 1 ನೇ ಆರೋಪಿ ಪರ : ಶ್ರೀ ಎಸ್.ಕೆ.ಎನ್. ವಕೀಲರಿಂದ :

ನಾವೆಲ್ಲರೂ ನಿರ್ದಿಷ್ಟ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ಮಾಡದೆ ಯಾರು ಕರೆದರೂ ಕೆಲಸಕ್ಕೆ ಹೋಗುತ್ತಿದ್ದೆವು. 1 ನೇ ಆರೋಪಿ ನಮ್ಮನ್ನು ಕೆಲಸಕ್ಕೆ ಕರೆದಿರುವುದಿಲ್ಲ. ಈ ಘಟನೆಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

ಪಾಟೀ ಸವಾಲು :2 ನೇ ಆರೋಪಿ ಪರ : ಶ್ರೀ ಪಿ.ಎ.ಎಸ್. ವಕೀಲರಿಂದ :

ನಾವುಗಳು 2 ನೇ ಆರೋಪಿಯ ಖಾಯಂ ಕೆಲಸಗಾರರಲ್ಲ ಎಂದರೆ ಸರಿ. ನಮ್ಮನ್ನು 2 ನೇ ಅರೋಪಿ ಕೆಲಸಕ್ಕೆ ನಿಯೋಜಿಸಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಆದರೆ ಫೋನ್ ಮಾಡಿ ತಿಳಿಸಿರುತ್ತಾರೆ. ನಾನು ಆ ಸಮಯದಲ್ಲಿ ಬೇರೆ ಕಡೆ ಕೆಲಸದಲ್ಲಿದ್ದು ಯಾವ ಸ್ಥಳ ಎಂದು ಈಗ ನೆನಪಿಲ್ಲ. ತಕ್ಷೀರು ದಿನ ನಾವು ಒಟ್ಟು 10 ಜನ ಕೆಲಸ ಮಾಡುತ್ತಿದ್ದೆವು. ನಾವು ಶಂಕರ್ ನಾಯಕ್ ರವರ ಮನೆಯಲ್ಲಿ ಬೆಳ್ಳಿಗ್ಗೆ 9.00 ಗಂಟೆಗೆ ಒಟ್ಟಾಗಿರುತ್ತೇವೆ. ಅಲ್ಲಿಂದ ಸಾಮಾನುಗಳನ್ನು ತೆಗೆದುಕೊಂಡು ತಕ್ಷೀರು ಸ್ಥಳಕ್ಕೆ ಹೋಗಿರುತ್ತೇವೆ. ಶಂಕರ್ ನಾಯಕ್ ರವರ ಮನೆ ಹಿರಿಯಡ್ಕ ದ ಗುಡ್ಡೆಯಂಗಡಿ ಬಳಿ ಇದೆ. ಶಂಕರ್ ನಾಯಕ್ ರವರ ಮನೆಯಿಂದ ತಕ್ಷೀರು ಸ್ಥಳಕ್ಕೆ 3 ಕಿ.ಮೀ ದೂರ ಇದೆ. ಘಟನಾ ಸ್ಥಳಕ್ಕೆ 10.00 ಗಂಟೆಗೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ವಿದ್ಯುತ್ ನಿಲುಗಡೆ ಯಾಗಿತ್ತಾ ಎಂಬ ಬಗ್ಗೆ ಶಂಕರ್ ನಾಯಕ್ ರವರು ತಿಳಿಸಿರುತ್ತಾರೆ. ನಾವು ಕೆಲಸ ಮಾಡುತ್ತಿದ್ದ ಸ್ಥಳದಿಂದ ಟ್ರಾನ್ಸ್ ಫಾರ್ಮರ್ ಅರ್ಧ ಕಿ.ಮೀ ದೂರ ಇತ್ತು. ಆ ಸಮಯದಲ್ಲಿ ಕೆ.ಇ.ಬಿ. ಯಿಂದ ಲೈನ್ ಮ್ಯಾನ್ ಇದ್ದರು. ಲೈನ್ ಮ್ಯಾನ್ ನಮ್ಮ ಜೊತೆ ಬೆಳ್ಳಿಗ್ಗೆಯಿಂದ ಮಧ್ಯಾಹ್ನದವರೆಗೂ ಇದ್ದರು. ಮಧ್ಯಾಹ್ನ ಕೆಲಸ ಮುಗಿದ ನಂತರ ಕರೆಂಟ್

ಆಫ್ ಮಾಡುವುದಕ್ಕೆ ಶಂಕರ್ ನಾಯಕ್ ರವರು ತಿಳಿಸಿದರು. ಕಂಬಕ್ಕೆ ಹತ್ತುವ ಕೆಲಸ ಮಧ್ಯಾಹ್ನ ಊಟದ ಮೊದಲೇ ಮುಗಿದಿತ್ತು. ಅನಂತರ ಬಾಕಿ ಇದ್ದ ಕೆಲಸ ಎಂದರೆ ನಾವು ತಂದಿದ್ದ ಸಾಮಾನುಗಳನ್ನು ಹಿಂದೆ ಕೊಂಡುಹೋಗುವುದಾಗಿತ್ತು. ಕರೆಂಟ್ ಸರಿ ಇಲ್ಲದ ಕಾರಣ ಅದನ್ನು ಸರಿ ಮಾಡಲು ಪುನಃ ಸತೀಶ್ ಶೆಟ್ಟಿಯವರು ಕಂಬ ಹತ್ತಿರುತ್ತಾರೆ. ಹೈ ವೋಲ್ಟೇಜ್ ಕರೆಂಟ್ ಬರುತ್ತಿದೆ ಎಂದು ಶಂಕರ್ ನಾಯಕ್ ರವರು ತಿಳಿಸಿರುತ್ತಾರೆ. ಅದನ್ನು ಮೆಸ್ಕಾಂ ಗೆ ತಿಳಿಸಲಾಗಿದೆ. ನಮಗೆ ಲೈನ್ ಆಫ್ ಆಗಿದೆ ಎಂದು ಶಂಕರ್ ನಾಯಕ್ ತಿಳಿಸಿರುತ್ತಾರೆ. ಮಧ್ಯಾಹ್ನ ಪುನಃ ಕೆಲಸ ಪ್ರಾರಂಭ ಮಾಡುವಾಗ ಲೈನ್ ಮ್ಯಾನ್ ಬಂದಿರುತ್ತಾರೆ. ಸಾರ್ವಜನಿಕರಿಗೆ ವಿದ್ಯುತ್ ಕಂಬ ಹತ್ತುವ ಹಾಗೂ ಲೈನ್ ಆಫ್ - ಆನ್ ಮಾಡುವ ಅಧಿಕಾರ ಇಲ್ಲ. ಮೆಸ್ಕಾಂನ ಲೈನ್ ಮ್ಯಾನ್ ರವರು ಮಾತ್ರ ಮಾಡಬಹುದು ಎಂದರೆ ಸರಿ. ಲೈನ್ ಆಫ್ ಆಗಿದೆ ಎಂಬ ಮಾಹಿತಿಯನ್ನು ಲೈನ್ ಮ್ಯಾನ್ ಕೊಡಬೇಕು ಎಂದರೆ ಸಾಕ್ಷಿ ಕೆಲಸ ಹೇಳಿದವರು ಕೊಡಬೇಕು. ಕೆಲಸ ಕೊಡುವವರು ಅಂದರೆ ಗುತ್ತಿಗೆ ಕೊಟ್ಟವರು. ಈ ಪ್ರಕರಣದ ಕೆಲಸವನ್ನು ಶಂಕರ್ ನಾಯಕ್ ರವರು ಗುತ್ತಿಗೆ ಪಡೆದಿಲ್ಲ ಎಂದರೆ ಗೊತ್ತಿಲ್ಲ ಆದರೆ ಕೆಲಸಕ್ಕೆ ಕರೆದಿರುತ್ತಾರೆ. ಶಂಕರ್ ನಾಯಕ್ ರವರ ಸಂಸ್ಥೆಯ ಹೆಸರು ದೇವಿ ಎಲೆಕ್ಟ್ರಿಕಲ್ಸ್ ಆಗಿರುತ್ತದೆ. ಅವರ ಕೆಲಸಗಾರರು ಪ್ರಕಾಶ್ ಮತ್ತು ವಿನೋದ್ ನಾಯಕ್ ಎಂದರೆ ಗೊತ್ತಿಲ್ಲ. ಅವರು ಘಟನಾ ದಿನ ಸ್ಥಳದಲ್ಲಿ ಇರಲಿಲ್ಲ. ಯಾವುದೇ ಗುತ್ತಿಗೆದಾರರ ಬಳಿ ಕೆಲಸ ಮಾಡಬೇಕಾದರೆ ನೋಂದಣಿ ಮಾಡಿಕೊಳ್ಳಬೇಕು ಎಂದರೆ ಗೊತ್ತಿಲ್ಲ. ನಾವು ಶಂಕರ್ ನಾಯಕ್ ರವರೊಂದಿಗೆ ನೋಂದಣಿ ಮಾಡಿಕೊಂಡ ಬಗ್ಗೆ ಹಾಗೂ ಸಂಬಳ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಘಟನೆ ದಿನ ಒಟ್ಟು ಎಷ್ಟು ಕಂಬ ಇತ್ತು ಎಂದು ನೆನಪಿಲ್ಲ. ವಯರ್ ಎಷ್ಟು ಸಾಮರ್ಥ್ಯ ಇತ್ತು ಎಂದು ಗೊತ್ತಿಲ್ಲ. ಎಷ್ಟು ಉದ್ದದ ವಯರ್ ಹಾಕಿದ್ದೇವೆ ಎಂದು ನೆನಪಿಲ್ಲ. ಎಲ್ಲಾ ಕಂಬಕ್ಕೂ ಬೇರೆ ಬೇರೆ ಕೆಲಸಗಾರರು ವಯರ್ ಹಾಕಿರುತ್ತೇವೆ. ಒಂದೇ ಬಾರಿಗೆ ನಾಲ್ಕು ಕಂಬಗಳಿಗೆ ನಾಲ್ಕು ಜನ ವಯರ್ ಹಾಕಿರುತ್ತೇವೆ. ಮೊದಲಿಗೆ ಯಾರು ಹತ್ತಿರುತ್ತಾರೆ ಎಂದು ನೆನಪಿಲ್ಲ. ಮೃತ ಸತೀಶ್ ಶೆಟ್ಟಿ ಯವರು ಹತ್ತಿದ ಕಂಬದಲ್ಲಿ ಕರೆಂಟ್ ಸರಿ ಇರಲಿಲ್ಲ. ಎಲ್ಲಾ

ಕರೆಂಟ್ ಲೈನ್ ನ್ನು ಆಫ್ ಮಾಡಲಾಗಿತ್ತು. ನನ್ನ ಸಮಕ್ಷಮ ಮೃತ ಸತೀಶ್ ಶೆಟ್ಟಿಯವರು ಲೈನ್ ಮ್ಯಾನ್ ರವರನ್ನು ಕಂಬ ಹತ್ತಲು ಕೇಳಿರುವುದಿಲ್ಲ. ಲೈನ್ ಮ್ಯಾನ್ ರವರ ಬಳಿ ಸುರಕ್ಷಾ ಸಾಧನಗಳನ್ನು ತಂದಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಎಲ್.ಟಿ. ಲೈನ್ ಮತ್ತು ಹೆಚ್.ಟಿ. ಲೈನ್ ಗಳಿಗೆ 3 ಮೀಟರ್ ಅಂತರವಿರುತ್ತದೆ. ಕಂಬಕ್ಕೆ ಏಣಿ ಮೂಲಕ ಹತ್ತುತ್ತೇವೆ. ಕಂಬದಲ್ಲಿ ಕೂತುಕೊಂಡು ಕೆಲಸ ಮಾಡಲು ಮರದ ಹಲಗೆಯ ಕುಟ್ಟಿ ಇರುತ್ತದೆ ಅದನ್ನು ಕಂಬಕ್ಕೆ ಸುತ್ತು ಹಾಕಿ ಅದು ಕೆಳಗೆ ಜಾರದ ಹಾಗೆ ಸಿಕ್ಕಿಸಿರುತ್ತಾರೆ. ಅದರಲ್ಲಿ ನಿಂತು ಕೆಲಸ ಮಾಡುತ್ತೇವೆ. ಮೃತ ಸತೀಶ್ ಶೆಟ್ಟಿಯವರು ಏಣಿಯಲ್ಲಿ ಹತ್ತಿ ಕೆಲಸ ಮಾಡುತ್ತಿದ್ದರು. ಏಣಿ ಹಾಗೂ ಎಲ್.ಟಿ.ಲೈನ್ ಗೆ ಎಷ್ಟು ಅಂತರ ಇತ್ತು ಎಂದು ಗೊತ್ತಿಲ್ಲ. ಸತೀಶ್ ಶೆಟ್ಟಿಯವರು ಪೂರ್ತಿಯಾಗಿ ಎಲ್.ಟಿ.ಲೈನ್ ನ ಕೆಳಗೆ ಕೆಲಸ ಮಾಡುತ್ತಿದ್ದರು. ನಾವು ಕೆಲಸ ಮಾಡುತ್ತಿರುವ ಸಮಯ ಮಳೆಗಾಲವಾಗಿತ್ತು. ಸತೀಶ್ ಶೆಟ್ಟಿಯವರ ತಲೆಗೆ ಸುಟ್ಟ ಗಾಯಗಳಾಗಿರಲಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನನ್ನ ಪ್ರಕಾರ ಸತೀಶ್ ಶೆಟ್ಟಿಯವರ ಕಿವಿಯ ಹತ್ತಿರ ಗಾಯಗಳಾಗಿತ್ತು. ಆ ಸಮಯದಲ್ಲಿ ಅವರು ಏಣಿಯಲ್ಲಿ ಇದ್ದರು. ಸರಿಗೆ ಸುತ್ತುವ ಕೆಲಸ ಬೆಳ್ಳಿಗ್ಗೆ ನಡೆಯುತ್ತಿತ್ತು. ಯಾವುದೇ ಕೆಲಸ ಬಾಕಿ ಇರಲಿಲ್ಲ ಎಂದರೆ ನೆನಪಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ